**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 88/2020**

**ಚಾ.ಸಾಃ 7, ಪ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ವಿನಾಯಕ ಭಟ್ಟ |
| ತಂದೆಯ ಹೆಸರು | ಸುಬ್ರಹ್ಮಣ್ಯ ಭಟ್ಟ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ರೈತಾಬಿ |
| ವಾಸ್ತವ್ಯ | ಸಾಲ್ಕೋಡ, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 17-02-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ನಿಪಿ-6 ಆಭರಣಗಳ ಜಪ್ತು ಪಂಚನಾಮೆಯ ನೈಜ ಪ್ರತಿಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ತಿಳಿಸಿದ್ದರಿಂದ ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಬಿ)ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 05-08-2020 ರಂದು ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಕಳ್ಳತನ ಆಗಿರುವ ಆಭರಣಗಳನ್ನು ಚಾಸಾ-11 ಅನಿಲ ಶೇಟರು ಹಾಜರು ಮಾಡುವುದಾಗಿ ಪೋಲೀಸರು ತಿಳಿಸಿ ಪಂಚನಾಮೆಗೆ ನನ್ನನ್ನು ಕರೆದಿದ್ದರು. ಚಾಸಾ-11 ರವರು ವೃತ್ತ ನಿರೀಕ್ಷಕರಾದ ಚಾಸಾ-24 ವಸಂತ ಆಚಾರರ ಮುಂದೆ ಬಂಗಾರದ ಆಭರಣಗಳನ್ನು ಹಾಜರು ಮಾಡಿರುತ್ತಾರೆ. ಸದರಿ ಆಭರಣಗಳನ್ನು ಠಾಣೆಯಲ್ಲಿ ಇದ್ದ ಕರ್ಕಿಯ ಮಹಾಲಕ್ಷ್ಮೀ ಜ್ಯುವೆಲರಿಯ ಶೇಟರು ತೂಕ ಮಾಡಿರುತ್ತಾರೆ. ನಂತರ ಪೋಲಿಸರು ದಾಖಲೆಯನ್ನು ಬರೆದುಕೊಂಡು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆ ಸಂದರ್ಭದಲ್ಲಿ ಛಾಯಾಚಿತ್ರ ತೆಗೆಸಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-7 ಛಾಯಾಚಿತ್ರವನ್ನು ಗುರುತಿಸಿರುತ್ತಾರೆ. ಚಾಸಾ-11 ಹಾಜರು ಮಾಡಿದ ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ಪ್ರಕರಣದಲ್ಲಿ ಹಾಜರು ಮಾಡಿರುವ ಮುಮಾ-1 ನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನನ್ನ ಮನೆ ಹೊನ್ನಾವರದಿಂದ ಸುಮಾರು 9 ಕಿಲೋಮೀಟರ್ ದೂರದಲ್ಲಿರುತ್ತದೆ. ಸದರಿ ದಿನದಂದು ನಾನು ಔಷಧಿಗಳನ್ನು ಖರೀದಿಸಲು ಹೊನ್ನಾವರದ ಬಳಿ ಬಂದಿದ್ದಾಗ ಚಾಸಾ-24 ನನ್ನನ್ನು ಪಂಚನಾಮೆಗೆ ಬರಮಾಡಿಕೊಂಡಿರುತ್ತಾರೆ. ನಾನು ಠಾಣೆಗೆ ಹೋದಾಗ ಬಂಗಾರದ ಆಭರಣಗಳು ಚಾಸಾ-11 ರ ಕೈಯಲ್ಲೇ ಇದ್ದವು. ಆಭರಣಗಳ ಒಟ್ಟೂ ತೂಕ ಗೊತ್ತಿಲ್ಲ. ಪ್ರತಿ ಆಭರಣಗಳ ಪ್ರತ್ಯೇಕ ತೂಕ

ಸಹ ಗೊತ್ತಿಲ್ಲ. ಸುಮಾರು 8 ಐಟಂಗಳು ಇದ್ದವು. ಎಷ್ಟು ಕೇಸಿಗೆ ಸಂಬಂಧಿಸಿದ ಆಭರಣಗಳು ಎನ್ನುವುದು ಗೊತ್ತಿಲ್ಲ.

ಪಂಚನಾಮೆಯನ್ನು ನಾವು ಹೇಳಿದ್ದು ಪೋಲಿಸರು ಬರೆದಿರುತ್ತಾರೆ. ನಾನು ಠಾಣೆಗೆ ಹೋಗುವ ಪೂರ್ವದಲ್ಲಿ ಬೇರೆ 2-3 ಜನ ಸಾರ್ವಜನಿಕರು ಇದ್ದರು.

ಮುಖ್ಯ ವಿಚಾರಣೆಯಲ್ಲಿ ಹೇಳಿದ ದಿನಾಂಕದಂದು ನಾನು ಠಾಣೆಗೆ ಹೋಗಿಲ್ಲ ಮತ್ತು ಶೇಟರು ಯಾವುದೇ ಆಭರಣಗಳನ್ನು ಹಾಜರು ಮಾಡಿಲ್ಲ ಮತ್ತು ಅವುಗಳನ್ನು ಪೋಲಿಸರು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**